Bad condition of Roads in Hassan District.

* ಪ್ರಶ್ನೆ 190.—ಶ್ರೀ ಎ. ಜಿ. ರಾಮಚಂದ್ರ ರಾಯರು (ಹಾಸನ ಡಿಸ್ಟ್ರಿಕ್ಟು—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಹಾಸನ ಡಿಸ್ಟ್ರಿಕ್ಟಿನ ರಸ್ತೆಗಳು ಬಹಳ ನಾದುರಸ್ತಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(b) ಹೊಸ 'ಬಸ್' ಲೈನುಗಳಿಗಾಗಿ 'ಪರ್ಮಿಟ್ಟು' ಗಳನ್ನು ಕೊಡುವಾಗ ರಸ್ತೆಗಳು, ಹೊಸ ಬಸ್ ಲೈನುಗಳನ್ನು ಹಾಕುವುದಕ್ಕೆ ಯೋಗ್ಯವಾಗಿದೆಯೇ—ಎಂಬುದನ್ನು ಸರಿಯಾದ ಅಧಿಕಾರವಿರತಕ್ಕವರು ಪರಿಶೀಲಿಸಿದ ಮೇಲೆ ಅಂಥ ಪರ್ಮಿಟ್ಟುಗಳನ್ನು ಕೊಡಲಾಗುತ್ತಿದೆಯೆ ;

(c) ಈಗ ರಸ್ತೆಗಳು ಇರುವ ಸ್ಥಿತಿಯಲ್ಲಿ ಈಗ ನಡೆಯುತ್ತಿರುವಷ್ಟು "ಬಸ್ ಲೈನು" ಗಳಿರುವುದು ಸರಿಯೆ ಎಂಬ ವಿಚಾರವನ್ನು ಪರಿಶೀಲಿಸುವುದಕ್ಕೆ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡುವರೆ ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಯ ಸಚಿವರು).—

(a) ಇಲ್ಲ.

(b) ಹೌದು.

(c) ಪ್ರಶ್ನೆಯ (a) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ, ಈ ಪ್ರಶ್ನೆಗೆ ಅವಕಾಶವಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಸನ ಡಿಸ್ಟ್ರಿಕ್ಟಿನ ರಸ್ತೆಗಳು, ತಾವು ಪ್ರಯಾಣಮಾಡಿ ತಿಳಿದಿರುವಮಟ್ಟಿಗೆ, ಅವು ಸಮರ್ಪಕವಾಗಿವೆಯೆಂದು ಹೇಳುತ್ತೀರಾ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವರು ನಿರೀಕ್ಷಣೆ ಮಾಡುವಂಥ ಉತ್ತಮಸ್ಥಿತಿಯಲ್ಲಿ ಕೆಲವು ರಸ್ತೆಗಳು ಇಲ್ಲದಿರಬಹುದು. It all depends upon the availability of funds.

ಶ್ರೀ ಎ. ಜಿ. ರಾಮಚಂದ್ರರಾಯರು.—ಹೆಚ್ಚಿಗೆ ಗ್ರಾಂಟ್ ಕೊಡಬೇಕೆಂದು ಕೇಳಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಸಾರಿ ಹೆಚ್ಚಿಗೆ ಗ್ರಾಂಟನ್ನು ಸ್ಪೆಷಲ್ಲಾಗಿ ಹಾಸನ ಡಿಸ್ಟ್ರಿಕ್ಟಿಗೆ ಕೊಡುತ್ತೇವೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಹಾಗಾದರೆ ಈಗಿರುವ ರಸ್ತೆಗಳ ದುಸ್ಥಿತಿಯನ್ನು ಉತ್ತಮಪಡಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಬಗ್ಗೆ ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಈ ರಸ್ತೆಗಳಿಂದ ಬರತಕ್ಕ ಟ್ಯಾಕ್ಸ್ ಮುಂತಾದ ಉತ್ಪತ್ತಿಗಳನ್ನು ಆ ರಸ್ತೆಗಳಿಗೆ ಉಪಯೋಗಿಸುತ್ತಿಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಭಾಗವನ್ನು ಉಪಯೋಗಿಸುತ್ತಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅವುಗಳಿಂದ ಬಂದ ಹಣವನ್ನೆಲ್ಲಾ ಅದಕ್ಕೆ ಉಪಯೋಗಿಸಬೇಕೆಂದು ಮಾಡಿದ್ದೀರಾ ? ಅಥವಾ ಬರುವ ದುಡ್ಡಿನಲ್ಲಿ ಎಷ್ಟು ಭಾಗ ಉಪಯೋಗಿಸಬೇಕೆಂದು ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆ ಹಣ ಜನರಲ್ ಫಂಡಿಗೆ ಸೇರಿದರೂ, ಸಾಮಾನ್ಯವಾಗಿ ಅದರಲ್ಲಿ ಬಂದದ್ದಕ್ಕಿಂತ ಹೆಚ್ಚಿಗೆಯೇ ಉಪಯೋಗಿಸುತ್ತಿದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅಲ್ಲಿ ಬಂದ ಟ್ಯಾಕ್ಸ್ ದುಡ್ಡು ಮುಂತಾದದ್ದನ್ನೆಲ್ಲಾ ಆ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಉಪಯೋಗಿಸಿದರೆ, ಅವು ಎಷ್ಟೋ ಉತ್ತಮಗೊಳ್ಳುತ್ತವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಹೆಚ್ಚಿಗೆಯೇ ಕೊಡುತ್ತಿದ್ದೇವೆ. ರಸ್ತೆಗಳು ಉತ್ತಮಗೊಳ್ಳುತ್ತಿವೆ.

Mr. SPEAKER.—Next question Sri M. Govinda Reddy.

Discharged Mysore Military Personnel and their resettlement and rehabilitation.

*ಪ್ರಶ್ನೆ 18.—ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಮಂದಿನ ಏಪ್ರಿಲ್ ತಿಂಗಳಿನಿಂದ ತಮ್ಮ ನೌಕರಿಯಿಂದ ಬಿಡುಗಡೆ ಮಾಡಲ್ಪಡಬೇಕಾಗಿರತಕ್ಕ ಸಂಸ್ಥಾನದ ಮಿಲಿಟೆರಿ ನೌಕರರ ಸಂಬಂಧವಾಗಿ ಪ್ರಧಾನ ಸಚಿವರು, ದೆಹಲಿಯಲ್ಲಿರುವ ಸಂಬಂಧಪಟ್ಟ ಅಧಿಕಾರಿಗಳೊಡನೆ ಮಾತುಕತೆ ನಡೆಯಿಸಿದ್ದಾರೆಯೆ ;

(b) ಮಾತುಕತೆ ನಡೆಯಿಸಿದ್ದ ಪಕ್ಷದಲ್ಲಿ, ಯಾವ ವಿಷಯಗಳನ್ನು ಚರ್ಚಿಸಲಾಯಿತು ;

(c) ಯಾವ ತೀರ್ಮಾನಕ್ಕೆ ಬರಲಾಯಿತು ;

(d) ತೊಂದರೆಗೀಡಾದ ಮಿಲಿಟೆರಿ ನೌಕರರಿಗೆ ದೊರಕಿಸಿಕೊಟ್ಟ ಪರಿಹಾರವೇನು ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ಸಚಿವರು).—

(a) ಹೌದು, ನಡೆಯೆಸಿದ್ದಾರೆ.

(b), (c) ಮತ್ತು (d) ಹಿಂದೆ ಮಿಲಿಟೆರಿ ನೌಕರಿಯಲ್ಲಿದ್ದು ಬಿಡುಗಡೆ ಹೊಂದಿರತಕ್ಕ ಮಿಲಿಟೆರಿ ನೌಕರರಿಗೆ ಪುನಃ ಉದ್ಯೋಗವನ್ನು ದೊರೆಕಿಸಿಕೊಡುವುದಕ್ಕೂ ಅಥವಾ ಅವರು ಪುನಃ ನೆಲೆಗೆ ನಿಲ್ಲುವಂತೆ, ಮಾಡುವುದಕ್ಕೂ ಮತ್ತು ಅವರ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವುದಕ್ಕೂ ಸಂಬಂಧಪಟ್ಟ ಯೋಜನೆಗಳನ್ನು ಚರ್ಚಿಸಲಾಯಿತು. ಮೈಸೂರು ಸರ್ಕಾರದವರು, ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಡಲು ಸಮಗ್ರವಾದ ಯೋಜನೆಗಳನ್ನು ತಯಾರಿಸಿದ್ದಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕೇಂದ್ರ ಸರ್ಕಾರದವರೊಡನೆ ಚರ್ಚೆ ನಡೆಸಿದಾಗ ಈಗ ಸೈನ್ಯದಿಂದ ನಿವೃತ್ತಿಮಾಡಬೇಕೆಂದಿರುವವರ ಪೈಕಿ ಕೆಲವರನ್ನು ಇಟ್ಟುಕೊಳ್ಳುವ ಪ್ರಶ್ನೆಯೇನಾದರೂ ಬಂದಿತ್ತೇ ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ short service commission ಗಳನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದೇವೆ.